# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಸುದ್ಯುಮ್ನ


ಕವಿ

## ಶ್ರೀಧರ ಡಿ. ಎಸ್.



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

ಯಕ್ಷವಾಹಿನಿ

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ.ಎಸ್ .**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಶ್ರೀ ಮದ್ಭಾಗವತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಉಡುಪಿ ಯಕ್ಷಗಾನ ಕೇಂದ್ರ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೭೭

**ಪಾತ್ರಗಳು:**

ವೈವಸ್ವತಮನು, ವಸಿಷ್ಠ, ಸುದ್ಯುಮ್ನ, ಮಹಾವಿಷ್ಣು, ಇಳಾ, ಬುಧ, ಪರಮೇಶ್ವರ, ಬಾಲಕ ಪುರೂರವ

**ಕಥಾ ಸಾರಾಂಶ:**

ಶ್ರೀಮದ್ಭಾಗವತ ಮಹಾಪುರಾಣದ ನವಮ ಸ್ಕಂಧದ ಸುಪ್ರಸಿದ್ಧ ಕಥೆ. ಸೂರ್ಯವಂಶ ಚಂದ್ರ ವಂಶಗಳ ಮೂಲ ಪುರುಷ ವೈವಸ್ವತ ಮನುವಿನ ಕಥೆ ಇದು. ಬಯಲಾಟದಲ್ಲಿ, ಹಲವಾರು ತಾಳಮದ್ದಲೆಯಲ್ಲಿ ಯಶಸ್ವಿ ಪ್ರಯೋಗ ಕಂಡ ಪ್ರಸಂಗ. ಯಾಗದ ಮೂಲಕ ಗಂಡು ಮಗನಾಗಬೇಕೆಂದು ಬಯಸಿದರೂ, ಹೆಣ್ಣುಮಗುವಾಗುವುದು ಅದನ್ನೇ ಮತ್ತೆ ಗಂಡಾಗಿಸುವುದು ಕಾಲಾಂತರದಲ್ಲಿ ಮತ್ತೆ ಆತ ಹೆಣ್ಣಾಗುವುದು, ಮರಳಿ ಗಂಡಾಗುವುದು. ಕೊನೆಗೂ ತಿಂಗಳೊಂದರ ಹೆಣ್ಣು ಗಂಡು, ಗಂಡುಹೆಣ್ಣು ಈ ಸ್ಥಿತಿಗೆ ತಲುಪಿ ರಾಜ್ಯಾಧಿಕಾರ ಕಳೆದುಕೊಂಡೂ ಚಂದ್ರವಂಶದ ಮೂಲ ಪುರುಷನಾಗುವುದು ಇದು ಇಲ್ಲಿ ಪ್ರಯೋಗಕ್ಕೊಡ್ಡುವ ವಿಚಾರ. ಯಕ್ಷಗಾನದಲ್ಲಿ ಇಂತಹ ಕಥೆ ಇದೊಂದೇ. ಮಾನಸಿಕ ಸಂಘರ್ಷ, ಶೃಂಗಾರ, ತರ್ಕ, ಚಿಂತನೆ ಹೀಗೆ ಬೆಳೆಯುತ್ತಾ ಸಾಗುವಾಗ ಸಮಸ್ತ ಭರತಖಂಡದ ಕ್ಷೇತ್ರ ಪರ್ಯಟನೆಯನ್ನೂ ಪ್ರಾಸಂಗಿಕವಾಗಿ ತರಲಾಗಿದೆ. ಸಾಮಾನ್ಯವಾಗಿ ದಿಗ್ವಿಜಯದ ಲೋಕ ಸಂಚಾರದ ಕಲ್ಪನೆಯನ್ನು ಬಿಟ್ಟು ಲೋಕಾನುಭವಕ್ಕಾಗಿಯೇ ಏಕಾಂಗಿಸಂಚಾರವನ್ನು ತಂದು ಹೊಸ ಚಿಂತನೆಗೆ ಅವಕಾಶವನ್ನು ಕಲ್ಪಿಸಲಾಗಿದೆ. ವಸಿಷ್ಠ, ಮನು, ಸುದ್ಯುಮ್ನ, ಇಳಾ ಬುಧ ಈ ಪಾತ್ರಗಳು ಪ್ರಧಾನವಾಗಿದ್ದು ಇಳಾ ಪಾತ್ರದ ಮೂಲಕ ಮಾನಸಿಕ ತೊಳಲಾಟ, ಶೃಂಗಾರದ ನೋಟಗಳ ಸಂಯೋಜನೆ ಹೊಸ ಕ್ರಮವಾಗಿದೆ. ಸಣ್ಣ ಪ್ರಸಂಗವಾಗಿದ್ದು ವಿಶಿಷ್ಟ ಪದ್ಯಗಳ ಸಂಯೋಜನೆಯನ್ನು ತಂದು ಹಾಡಿನ ಸೊಗಸಿಗೂ ಮಾದರಿ ಸುದ್ಯುಮ್ನ ಪ್ರಸಂಗ.

**ಕವಿ ಪರಿಚಯ:**

ನಿವೃತ್ತ ಕನ್ನಡ ಉಪನ್ಯಾಸಕ. ಸಾಹಿತಿ, ಯಕ್ಷಗಾನ ಅರ್ಥಧಾರಿ ಮತ್ತು ಪ್ರಸಂಗ ಕರ್ತೃ. ಯಕ್ಷಗಾನ ವಿಮರ್ಶಕ. ಊರು-ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು, ನಿಟ್ಟೂರು ಬಳಿಯ ಧರೇಮನೆ. ಕಳೆದ ಮೂವತ್ತಾರು ವರ್ಷಗಳಿಂದ ನೆಲೆಸಿರುವುದು ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ. ವಿದ್ಯಾರ್ಥಿ ದೆಸೆಯಿಂದಲೇ ಯಕ್ಷಗಾನದಿಂದ ಆಕರ್ಷಿತ. ವೇಷಧಾರಿಯಾಗಿ, ಅರ್ಥಧಾರಿಯಾಗಿ ಪಳಗಲು ವಿದ್ಯಾಭ್ಯಾಸ ಮಾಡಿದ ಉಡುಪಿ ಸಹಕಾರಿಯಾಯಿತು.

ಉಡುಪಿ ಯಕ್ಷಗಾನ ಕೇಂದ್ರ ಯಕ್ಷಗಾನ ಪ್ರಸಂಗ ಮಾಲಿಕಾ ಎಂಬ ಶೀರ್ಷಿಕೆಯಲ್ಲಿ ೧೩ ಪ್ರಸಂಗಗಳನ್ನು ಒಂದೇ ಕೃತಿಯಲ್ಲಿ ಪ್ರಕಟಿಸಿದೆ. ಯಕ್ಷಗಾನದ ಸುಮಾರು ನೂರಾಮೂವತ್ತು ಮಟ್ಟುಗಳನ್ನು ವಿವಿಧ ಪ್ರಸಂಗಗಳಲ್ಲಿ ಬಳಸಿಕೊಳ್ಳಲಾಗಿದೆ. ಪ್ರಸಂಗ ರಚನೆ ಮಾತ್ರವಲ್ಲದೆ, ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ನೂರಾರು ವಿಮರ್ಶೆಗಳು, ಚಿಂತನೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ ಪ್ರಕಟಗೊಂಡಿವೆ. ಕಿನ್ನಿಗೋಳಿಯ `ಯಕ್ಷಲಹರಿ' ಯಕ್ಷಗಾನ ಸಂಸ್ಥೆಯಲ್ಲಿ ೨೪ ವರ್ಷ ಕಾರ್ಯದರ್ಶಿಯಾಗಿ ಸೇವೆ. ಹಲವು ತಾಳಮದ್ದಲೆ ಸ್ಪರ್ಧೆಗಳನ್ನು, ಸಪ್ತಾಹಗಳನ್ನು ಆಯೋಜಿಸಿದ್ದಾರೆ. ಜೊತೆಗೆ, ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿರುವ ಆಟ-ಕೂಟಗಳಲ್ಲಿ ಅವಲೋಕನಕಾರರಾಗಿ ಮತ್ತು ಗೋಷ್ಠಿ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಅನುಭವ. ಅರ್ಥಧಾರಿಯಾಗಿ ಸಾವಿರಾರು ಕೂಟಗಳಲ್ಲಿ ಭಾಗವಹಿಸುವಿಕೆ. ಎಲ್ಲ ಬಗೆಯ ಪಾತ್ರಗಳ ನಿರ್ವಹಣೆ. ಅವಧಾನಗಳಲ್ಲಿ ಪೃಚ್ಛಕರಾಗಿ, ಸಂಘ-ಸಂಸ್ಥೆಗಳ ಸಲಹೆಗಾರರಾಗಿ, ಶ್ರೀ ಗುರು ರಾಘವೇಂದ್ರ ಸಂಚಾರಿ ಯಕ್ಷಗಾನ ಮಂಡಳಿ ಹೊಸಬೆಟ್ಟು ಸುರತ್ಕಲ್ ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಸಾಹಿತ್ಯದ ಇತರ ಪ್ರಕಾರಗಳಲ್ಲೂ ಆಸಕ್ತಿ. ರಾಜಕೀಯ ವಿಶ್ಲೇಷಣೆ, ರಂಗ ವಿಮರ್ಶೆ, ಲಲಿತ ಪ್ರಬಂಧ, ನಗೆ ಲೇಖನಗಳನ್ನು ಬರೆಯುವುದೂ ಹವ್ಯಾಸ. ಹಾಸ್ಯ ಬರಹ ಕುರಿತ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವೂ ಬಂದಿದೆ. 'ಬಸ್ಸು ಜಟಕಾ ಬಂಡಿ' ಎಂಬ ನಗೆ ಲೇಖನಗಳ ಪುಸ್ತಕ ಪ್ರಕಟಗೊಂಡಿದೆ. ಶ್ರೀರಾಮಚಂದ್ರಾಪುರ ಮಠದಿಂದ ಪ್ರಕಟಗೊಂಡ ಗುರುಗ್ರಂಥಮಾಲಿಕೆಯಲ್ಲಿ ಶುಕ್ರಾಚಾರ್ಯ, ದ್ರೋಣಾಚಾರ್ಯ, ಮಹಾಮುನಿ ಶುಕ ಎಂಬ ಮೂರು ಕೃತಿಗಳು ಪ್ರಕಟವಾಗಿವೆ. ಮಂಗಳೂರು ವಿಶ್ವವಿದ್ಯಾನಿಲಯದ ದ್ವಿತೀಯ ಬಿ. ಕಾಂ ಪದವಿ ಕನ್ನಡ ಪಠ್ಯಪುಸ್ತಕದಲ್ಲಿ `ಮಹಾಪ್ರಸ್ಥಾನ' ಪ್ರಸಂಗದ ಪಾಂಡವ ಸ್ವರ್ಗಾರೋಹಣದ ಒಂದು ಭಾಗ ಪಠ್ಯವಾಗಿದೆ.

ಯಕ್ಷಗಾನ ಪತ್ರಿಕೆ `ಕಣಿಪುರ'ದಲ್ಲಿ ರಂಗಸ್ಥಳದ ಅಭಿಜಾತ ಕವಿಗಳು ಎಂಬ ಅಂಕಣವನ್ನು ಬರೆಯುತ್ತಿದ್ದು, ಇದರಲ್ಲಿ ಯಕ್ಷಗಾನ ಸುಪ್ರಸಿದ್ಧ ಕವಿಗಳ ಪರಿಚಯ ನೀಡಲಾಗುತ್ತಿದೆ. ಬೆಂಗಳೂರಿನ `ಸುದಿನ ಸುರಭಿ' ಪತ್ರಿಕೆಯಲ್ಲಿ `ಪುರಾಣ ಸ್ವಾರಸ್ಯಗಳು' ಎಂಬ ಅಂಕಣ ಬರಹ ಪ್ರಕಟಗೊಂಡಿದೆ. ಶ್ರೀ ರಾಮಚಂದ್ರಾಪುರ ಮಠದ `ಧರ್ಮಭಾರತೀ' ಮಾಸಪತ್ರಿಕೆಯಲ್ಲಿ `ವೀರತಪಸ್ವಿ' ಧಾರಾವಾಹಿಯಾಗಿ ಪ್ರಕಟವಾಗುತ್ತಿದೆ.

ಉಡುಪಿಯ ಯಕ್ಷಗಾನ ಕಲಾರಂಗ ಸಂಸ್ಥೆ ೨೦೧೫ನೇ ಸಾಲಿನ `ತಲ್ಲೂರು ಕನಕ ಅಣ್ಣಯ್ಯ' ಪ್ರಶಸ್ತಿ ನೀಡಿ ಗೌರವಿಸಿದೆ. ಜೊತೆಗೆ ಅವರ ಪ್ರಸಂಗಗಳ ಕುರಿತ ಸಾಹಿತ್ಯ-ಸಾಧನಾವಲೋಕನ, ಅವರ ಯಕ್ಷಗಾನ ಪ್ರಸಂಗಗಳ ವಸ್ತುವಿನ್ಯಾಸ-ಆಶಯ, ಛಂದಸ್ಸಿನ ಬಳಕೆ ಕುರಿತಾಗಿ ಯಕ್ಷ ವಿದ್ವತ್ ಲೋಕ ಭಾಷಣ-ಚರ್ಚೆಗಳನ್ನು ದಿನವಿಡೀ ನಡೆಸಿದ್ದು ಗಮನಾರ್ಹ. ಯಕ್ಷಗಾನ ಬಯಲಾಟ ಅಕಾಡೆಮಿ ಶ್ರೀಧರರ `ಯಕ್ಷಗಾನ ಪ್ರಸಂಗ ಮಾಲಿಕಾ' ಕೃತಿಗೆ ೨೦೧೧ನೇ ಸಾಲಿನ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಶಿವಮೊಗ್ಗದಲ್ಲಿ ೨೦೧೬ರ ಜನವರಿಯಲ್ಲಿ ನಡೆದ ಅಖಿಲ ಭಾರತ ೧೧ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ೨೦೧೬ರ ಫೆಬ್ರವರಿ ತಿಂಗಳಲ್ಲಿ ಕೆರೆಮನೆಯಲ್ಲಿ ನಡೆದ `ಶಂಭುಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. `ಜಡಭರತ' ಎಂಬ ಪೌರಾಣಿಕ ಕಾದಂಬರಿ ಪ್ರಕಟಗೊಂಡಿದ್ದು, `ಅಸುರ ಗುರು' ಎಂಬ ಬೃಹತ್ ಕಾದಂಬರಿ ಪ್ರಕಟಣೆಗೆ ಸಿದ್ಧವಾಗಿದೆ.

ಇವರು ಬರೆದ ಪ್ರಸಂಗಗಳು: ಕಬಂಧ ಮೋಕ್ಷ, ಸುದ್ಯುಮ್ನ, ಆದಿನಾರಾಯಣ ದರ್ಶನ, ಕುವಲಯಾಶ್ವ, ಗರುಡ ಪ್ರತಾಪ, ಬಾಲಭಾರತ, ಸತ್ವಶೈಥಿಲ್ಯ, ಮಹಾಪ್ರಸ್ಥಾನ, ಪರೀಕ್ಷಿತ-ಆಸ್ತೀಕಜನ್ಮ, ಜನಮೇಜಯ, ಶುಕ್ರಸಂಜೀವಿನೀ, ಅಗಸ್ತ್ಯ, ಜಡಭರತ, ಸಮ್ರಾಟ್ ಮರುತ್ತ, ಕುಜ್ರುಂಭ ಕಂದರ, ಯಕ್ಷಪ್ರಶ್ನೆ, ಯೋಗಾವತಾರಂ, ಫಲ್ಗುಣೀ ತೀರ್ಥ ಮಹಿಮೆ, ವೀರ ಚಿತ್ರಧ್ವಜ, ಶ್ರೀರಂಗ ರಾಯಭಾರ, ನಾಲಾಯನೀ, ಬಕನ ಬಂಡಿ, ಅಂಗಾರಪರ್ಣ ವೃತ್ತಾಂತ, ಧೌಮ್ಯಪರಿಗ್ರಹ, ದ್ರೌಪದೀ ಸ್ವಯಂವರ, ದುರ್ಗಮಾಸುರ ವಧೆ, ಶರವೂರ ಶ್ರೀದುರ್ಗೆ, ಪೃಥುಯಜ್ಞ, ಹನ್ನಾರ ರಾಮೇಶ್ವರ ಮಹಾತ್ಮೆ, ನೈಮಿಷಾರಣ್ಯ ನಿರ್ಮಾಣ, ಸ್ವರ್ಣಕಮಲ

**ಟಿಪ್ಪಣಿ:**

ಹೆಚ್ಚಿನ ಪುರಾಣಗಳಲ್ಲಿ ಬರುವ 'ವಂಶಾನುಚರಿತ'ದಲ್ಲಿ ಸುದ್ಯುಮ್ನರಾಜನ ಕಥೆ ಬರುತ್ತದೆ. ವಿಶೇಷವಾಗಿ ಭಾಗವತ ನವಮ ಸ್ಕಂಧದಲ್ಲಿ ವಿವರವಾಗಿ ಬರುವ ಈ ಕಥೆಯನ್ನು ಆಧಾರವಾಗಿಟ್ಟುಕೊಂಡು ಈ ಪ್ರಸಂಗಕೃತಿಯನ್ನು ರಚಿಸಲಾಗಿದೆ. ಗಂಡು ಹೆಣ್ಣಾಗುವ ಕಥೆ ಸ್ವಲ್ಪ ವ್ಯತ್ಯಾಸವಾಗಿ ಬೇರೆ ರೀತಿಯಲ್ಲೂ ಪ್ರಚಲಿತವಿದೆ (ಉದಾ: ಕರ್ದಮ ಪ್ರಜಾಪತಿಯ ಮಗ ಇಳಾ ಎಂಬ ಅರಸ). ಸೂರ್ಯವಂಶದ ಮೊದಲ ಅರಸನಾಗಬೇಕಿದ್ದ ಸುದ್ಯುಮ್ನ ವೃದ್ಧಿ-ಕ್ಷಯ ಕಾರಣನಾಗಿ ಚಂದ್ರವಂಶೀಯನಾದ ಕಾರಣವನ್ನು ಇಲ್ಲಿ ಚಿತ್ರಿಸಲಾಗಿದ್ದು - ಮೂಲದಲ್ಲಿ ಕೆಲವು ಮಾರ್ಪಾಡನ್ನು ಮಾಡಿಕೊಳ್ಳಲಾಗಿದೆ. ಲೋಕಾಂತರದ ತಿರುಗಾಟ, ಬುಧನು ಇಳೆಯನ್ನು ತ್ಯಜಿಸಲು ಕಾರಣ, ಪ್ರತಿಷ್ಠಾನಪುರ ನಿರ್ಮಾಣ ಇಲ್ಲಿಯ ಕಲ್ಪಿತಭಾಗಗಳು. ಕೂಟಕ್ಕೆ ಸೊಗಸಾಗಿ ಹೊಂದುವ ಈ ಭಾಗದ ಕೊರತೆ ಎಂದರೆ ಕಾಳಗವೇ ಇಲ್ಲದಿರುವುದು. ಅದನ್ನು ಉಳಿದ ಸನ್ನಿವೇಶದಲ್ಲಿ ತುಂಬಿಸಬೇಕು. ಹಾಸ್ಯಕ್ಕೂ ಬೇಕಾದಷ್ಟು ಅವಕಾಶ ಇಲ್ಲಿಲ್ಲ.

# ಪ್ರಸಂಗ ಸಾಹಿತ್ಯ

**ನಾಂದಿ :**
**ಸಾಂಗತ್ಯ - ರೂಪಕ**
ಆನೆಯಮೊಗ ಹಂಸಯಾನೆ ಸರಸ್ವತಿ |
ಶ್ರೀನಾಥ ಬೊಮ್ಮರಿಂಗೆರಗಿ ||
ಗಾನ ನಾಟ್ಯದ ದಿವ್ಯಜ್ಞಾನದೈಸಿರಿ ಯಕ್ಷ |
ಗಾನದೊಳೊರೆವೆನೀ ಕೃತಿಯ || 1 || 1 ||

**ಮಧುಮಾಧವಿ - ತ್ರಿವುಡೆ**
ದಿನಮಣಿಯ ಸುತ ಶ್ರಾದ್ಧದೇವನು |
ಜನಪತಿಯು ಕೋಸಲವ ಕಟ್ಟುತ |
ಮನುಜಲೋಕಕೆ ಸ್ಮೃತಿಯನಿತ್ತನು |
ವನಧಿಶಯನನ ಕರುಣದಿ || 1 ||
ಮೂರುಯೋಜನದಗಲ ಮೇಣೀ |
ರಾರು ಯೋಜನದುದ್ದ ಸರಯೂ |
ತೀರದಲಿ ನಿರ್ಮಿಸುತಯೋಧ್ಯಾ |
ಚಾರು ಸುಂದರ ನಗರವ || 2 ||
ವನಜಸಂಭವನೊಲಿಯುತೀಳನೆ |
ಮನುವ ಪಟ್ಟವನಿತ್ತು ಪರಸಲು |
ವನಧಿವಸನೇಶ್ವರನು ಬೆಳಗಿದ |
ದಿನಪತೇಜದಿ ಲೋಕವ || 3 || 4 ||

**ವಾರ್ಧಕ**
ಸುತರಿಲ್ಲದುದಕೆ ಚಿಂತಿಸುತ ನೃಪ ಗುರುಮುಖೋ |
ದಿತಮಾದ ಮೈತ್ರಾವರುಣಿ ಯಾಗಮಂಗೈದ |
ಡತಿ ಚೆಲುವಿನಿಂ ಮೆರೆವ ಬಾಲಕಿಯು ಜನಿಸಿರಲ್ ಕ್ರತುಫಲಕೆ ಬೆರಗಾಗುತ ||
ಕ್ಷಿತಿಯೊಳ್ ವಸಿಷ್ಠಸಂಕಲ್ಪ ತಪ್ಪಲಿಕುಂಟೆ |
ವ್ಯತಿರೇಕಮೆಂತಾಯ್ತೆನುತ್ತ ಸಂದೇಹಿತಂ |
ಸುತೆಗಿಟ್ಟಿಳಾ ನಾಮಮಂ ಬಳಿಕ ಪೊರವಂಟ ಗುರ್ವಾಶ್ರಮಕೆ ಭೂಪತಿ || 5 || 5 ||

**ಭಾಮಿನಿ**
ಋತ್ವಿಜೋತ್ತಮ ಬ್ರಹ್ಮಋಷಿವರ |
ಸತ್ತ್ವಗುಣ ಸನ್ಮಂತ್ರಸಾಧಕ |
ನಿತ್ಯನಿರ್ಮಲಚಿತ್ತ ಸಕಲಾಗಮಸುವಿಜ್ಞಾನಿ ||
ಸತ್ಯಶೋಧಕ ಯೋಗಿವರ ಸುಪ |
ವಿತ್ರನಾಗಿಹ ಮುನಿವಸಿಷ್ಠನು |
ತತ್ತ್ವಮಥನಾಸಕ್ತ ಶಿಷ್ಯೋತ್ತಮರ ನಡುವೆಸೆದ || 6 || 6 ||

**ಭೈರವಿ - ಝಂಪೆ**
ಧರಣಿಪನು ರಥವಿಳಿದು | ಪರಿವಾರದೊಡನೆ ನಡೆ |
ತರುತ ಗುರುಮನೆಗೆ ವಿನಯದಲಿ ||
ಚರಣಕೆರಗಿದನ ಸತ್ಕರಿಸಿ ರಾಜೋಚಿತದಿ |
ಕರವಿಡಿದು ಕುಳ್ಳಿರಿಸಿ ಕೇಳ್ದ || 1 || 7 ||

**ಮಧ್ಯಮಾವತಿ - ಅಷ್ಟ**
ಬರವಿದೇನಯ್ಯ ಭೂಪ | ಕೋಸಲಧೀಶ |
ಬರವಿದೇನಯ್ಯ ಭೂಪ ||
ಧರಣಿಪತಿ ರಾಜ್ಯಾಂಗ ಕ್ಷೇಮವೆ |
ಪರವು ಪ್ರಜೆಗಳು ಸುಖವೆ ಪೇಳೈ |
ಕೊರತೆಗಾಂಬುದು ಮೊಗದೊಳೇನೋ |
ಕರೆದರಲ್ಲಿಗೆ ಬರುತಲಿರ್ದೆವು || 1 ||

ನಿಮ್ಮ ಕರುಣೆ ಹೊಂದುತ | ಸುಕ್ಷೇಮಿಗಳ್ |
ಎಮ್ಮವರನವರತ ||
ನೆಮ್ಮದಿಯು ಗುರುಗೃಹಕೆ ಬರುವಡೆ |
ನೆಮ್ಮಿ ಬಂದಿಹೆನೆನ್ನ ಕಾರ್ಯಕೆ |
ಸಮ್ಮತವಿದೆಂದರಿತು ಬಂದೆನು |
ತಮ್ಮೊಳೊಂದು ವಿಚಾರವರಿಯಲು || 2 || 9 ||

**ಕೇದಾರಗೌಳ - ಅಷ್ಟ**
ಭೂಲಲಾಮನೆ ಪೇಳು ಪೇಳೇನು ಕೊರತೆಯು |
ಆಳುವ ದೊರೆಯು ನೀನು ||
ಕಾಲಕಾಲದ ರಾಜ್ಯಭಾರದ ಭಾರದಿಂ |
ವೇಳೆ ಸಿಗದು ಗೃಹಕೆ || 1 ||
ಅಧ್ವರ್ಯದೊಳಗೆ ತಾವಿದ್ದು ಯಾಗವಗೈದೆ |
ಉದ್ಧರಿಸಲು ವಂಶವ ||
ಬದ್ಧಸಂಕಲ್ಪವು ತಿದ್ದಿತೇಕರಿಯೆನು |
ಹೊದ್ದಿದೆ ಪುತ್ರಿಯನು || 2 ||
ಲೋಕಗುರುವು ನೀವು ಗೈದ ಸಂಕಲ್ಪವ |
ದೇಕೆ ವ್ಯತ್ಯಯವಾಯಿತು ||
ವ್ಯಾಕುಲಗುರುವೆ ಮುಂದೇಂಕಾರ್ಯಗೈಯ್ಯಲಿ |
ಮ್ಮೀ ಕುಲ ಬೆಳಗಿಪರೆ || 3 || 12 ||

**ಭಾಮಿನಿ**
ಅಂತರಂಗದಿ ಗ್ರಹಿಸಿ ನೃಪ ತವ |
ಕಾಂತೆ ಶ್ರದ್ಧಾದೇವಿಯಾದಿನ |
ಕಂತುಸತಿಸನ್ನಿಭಳು ಸುತೆ ತನಗಾಗಬೇಕೆನುತ ||
ಚಿಂತಿಸುತ ತಂತ್ರವನು ಹೋತೃವಿ |
ಗಿಂತೊರೆಯಲವಗೈದನಂತೆಯೆ |
ಮಂತ್ರದಂತರ ಬದಲಿಸಿತು ಸುತನನ್ನು ಸುತೆಯಾಗಿ || 1 || 13 ||

**ಬೇಗಡೆ - ಏಕ**
ಎನ್ನ ಸಂಕಲ್ಪವನು ತಿದ್ದುತಲಿ | ಅ-ಪ್ರಾಕೃತದಿ ತಾ |
ಹೆಣ್ಣು ಮಗು ಜನಿಸಿರ್ದ ರೀತಿಯಲಿ ||
ಪುಣ್ಯವಿಲ್ಲವು ಪುತ್ರನೇ ಬೇ |
ಕೆನ್ನುವರೆ ಪುರುಷೋತ್ತಮನ ಕೃಪೆ |
ಯನ್ನು ಪಡೆಯುತಲೀಕೆಯನು ಪುರು |
ಷನ್ನಗೈದರೆ ಶ್ರೇಯಮಪ್ಪದು || 1 ||
ಗುರುವೆ ಸಾಧನೆಯಿಂದ ಶ್ರೀಹರಿಯ | ಕಂಡೆನ್ನ ತರಳೆಯ |
ತರಳನಂಗೈಯುತ್ತ ಕೊಡು ಶ್ರೇಯ ||
ಗುರಿಯು ಸತ್ಕುಲ ಮೆರೆಯಬೇಕೆಂ |
ದಿರುವುದಪರಾಧವನು ಮನ್ನಿಸಿ |
ಪೊರೆವುದೆಮ್ಮನ್ವಯವನೆನ್ನುತ |
ಲೆರಗಿದನು ಮುನಿಪದಕೆ ಭೂಪತಿ || 2 || 15 ||

**ಸಾಂಗತ್ಯ - ರೂಪಕ**
ಭೂಪತಿ ಬಿಡು ಚಿಂತೆ ಶ್ರೀಪತಿಯೊಲಿಯುವ |
ನೀ ಪಡೆಯುವೆ ವೀರಸುತನ ||
ತಾಪಸೋತ್ತಮನು ಬೀಳ್ಕೊಂಡು ಧ್ಯಾನಿಸಿದನು |
ಶ್ರೀಪುರುಷೋತ್ತಮ ಹರಿಯ || 1 ||
ಅಷ್ಟಾಕ್ಷರೀ ದಿವ್ಯಮಂತ್ರದಿಂ ನುತಿಪ ವ |
ಸಿಷ್ಠ ಯೋಗೀಂದ್ರನ ಕರೆಗೆ ||
ಸ್ಪಷ್ಟಗೊಂಡನು ಮಂತ್ರಮೂರ್ತಿ ನಾರಾಯಣ |
ಸೃಷ್ಟಿಗಿಳಿದು ಬಂದ ಹೊರೆಗೆ || 2 ||
ಯತಿವರ ನೀನಿಂತು ನುತಿಸಿ ಕರೆದುದೇಕೆ |
ಹಿತವಂತನೀ ಲೋಕದೊಳಗೆ ||
ವ್ರತಿಪತಿ ನಿನ್ನಿಂದಾಗದ ಕಾರ್ಯವೇನಿದೆ |
ಮತಿವಂತ ಪೇಳೆಂದ ಹರಿಯು || 3 || 18 ||

**ಮಧ್ಯಮಾವತಿ - ಆದಿ**
ಮಣಿದು ಪೇಳಿದ ಮುನಿ ಮನುವೈವಸ್ವತನು |
ತನಯನು ಬೇಕೆಂದು ಗೈದ ಯಾಗವನು ||
ತನುಜೆಯಾದಳು ಹೋತೃ ವಿಪರೀತವೆಸಗೆ |
ಘನಸಂಕಲ್ಪವು ತಿದ್ದಿತೆನುವಂಥ ವ್ಯಥೆಗೆ || 1 ||
ಪರಮಪುರುಷ ನೀನು ಕೃಪೆದೋರಿ ಸುತೆಯ |
ಪುರುಷನಗೈಯ್ಯುತುದ್ಧರಿಸು ಭೂಪತಿಯ ||
ವರಯಾಗಸಂಕಲ್ಪ ತಪ್ಪಿದ ಚ್ಯುತಿಯು |
ಪರಿಹರಗೊಳಲೆನ್ನುತ್ತೆರಗಿದ ವ್ರತಿಯು || 2 || 20 ||

**ಸೌರಾಷ್ಟ್ರ - ತ್ರಿವುಡೆ**
ಎನ್ನ ಸ್ಮರಿಸುತ ಸ್ಪರ್ಶಿಸಲು ನೀ |
ಕನ್ನೆ ಪುರುಷತ್ವವನು ಪೊಂದುತ |
ಮಾನ್ಯನಪ್ಪನು ಚಂದ್ರವಂಶೋ | ತ್ಪನ್ನನಹನು || 1 || 21 ||

**ವಾರ್ಧಕ**
ಉತ್ತಮಶ್ಲೋಕನಿಂತೊರೆದು ತೆರಳಲ್ಬಳಿಕ |
ಪೃಥ್ವಿಪತಿಯಂ ಕಾಂಬ ತವಕದಿಂ ಗುರುವರಂ |
ಅರ್ತಿಯಿಂದೈತರಲ್ ಸ್ವಾಗತಿಸಿ ಸತ್ಕರಿಸೆ, ಮಿತ್ರಸುತನೊಡನೆಂದನು ||
ಸಾರ್ಥವಾದುದು ಭೂಪ ಸುತೆಯ ತಾರೆನೆ, ಕರೆಸೆ |
ನೆತ್ತಿಯಂ ಪರಿಸ್ಮರಣೆಯಿಂದ ಬೋಳೈಸಲ್ಕೆ |
ಪಾರ್ಥಿವಾಗ್ರಣಿಯ ಸುತೆ ಪುರುಷರೂಪಾಂತಿರಲ್ ಬೆರಗಾದುದಖಿಲಜನವು || 1 || 22 ||

**ಕಲ್ಯಾಣಿ - ರೂಪಕ**
ಗುರುವರೇಣ್ಯ ಧನ್ಯನಾದೆನು | ಶ್ರೀಹರಿಯ ದಯದಿ |
ತರಳೆ ಪುರುಷರೂಪುಗೊಂಡನು ||
ಬೆರಗುಗೊಂಡೆ | ಕರುಣನಿಧಿಯೆ | ತರಳನಿಂಗೆ ಪೆಸರನಿಟ್ಟು |
ಹರಸಿ ವಿದ್ಯೆ ಭರಿಸಬೇಕು |
ಧರೆಯ ಭಾರ ಹೊರವ ತೆರದಿ || ಗುರುವರೇಣ್ಯ || 1 ||
ವಸುಧೆಪತಿಯೆ ನಿನ್ನ ತರಳನು | ಸುದ್ಯುಮ್ನನೆಂಬ |
ಪೆಸರಿನಿಂದ ಜಗದಿ ಮೆರೆವನು ||
ರಸೆಯಪಾಲಗುಚಿತ ವಿದ್ಯಾ | ವಿಸರವಿವಗೆ ಕಲಿಸಿಕೊಡುವೆ |
ಕುಶಲಮನದಿ ಕಳುಹಿಸೆನಲು |
ವಸುಮತೀಶನೊಪ್ಪಿಸಿದನು || ವಸುಧೆಪತಿಯೆ || 2 || 24 ||

**ಭಾಮಿನಿ**
ತರಳನನು ತನ್ನಾಶ್ರಮಕೆ ಕರೆ |
ತರುತ ಕಲಿಸಿದ ಸಕಲವಿದ್ಯೆಯ |
ಭರಿತ ವಿದ್ಯಾಪನ್ನ ಯೌವನವಡೆದು ಪುರಕಾಗಿ ||
ಬರುತ ಪಿತನಿಂಗೆರಗೆ ತೋಷದಿ |
ಪುರದಿ ಸಂಭ್ರಮದೊಸಗೆ ಮೆರೆಯಲು |
ಧರಣಿಪತಿಸುತಗೆಂದ ಭವಿತವ್ಯವನು ಚಿಂತಿಸುತ || 1 || 25 ||

**ಕೇದಾರಗೌಳ - ಝಂಪೆ**
ಕ್ಷಿತಿಯ ಭಾರವನು ಧರಿಸಿ | ನಡೆ ಮಗನೆ |
ಸತತ ಸಾಹಸವ ಮೆರೆಸಿ ||
ಅತುಲಸಂಪದವ ಬೆಳೆಸಿ | ಪ್ರಜೆಗಳಂ |
ಸುತರಂತೆ ಪೊರೆಯೊ ಸಹಿಸಿ || 1 ||
ತಮ್ಮ ಹಿರಿತನದಿ ರಸನೆ | ರಾಜ್ಯಾಂಗ |
ನೆಮ್ಮದಿಯೊಳಿಹುದು ಪಿತನೆ ||
ನೆಮ್ಮಿ ನಿಮ್ಮಾಳ್ವಿಕೆಯನು | ಪ್ರಜರಿರಲಿ |
ಸಮ್ಮತದಿ ಸುಖದೊಳಿನ್ನು || 2 ||
ಕುವರ ಕೇಳೀ ಲೋಕವ | ಬೆಳಗಿಸಲು |
ಯುವಕ ನೀನೇ ತಕ್ಕವ ||
ಅವನಿ ಸಂತಸವಗೊಳಲಿ | ಪ್ರತಿಭೆಯಿಂ |
ನವನವೋನ್ಮೇಷಶಾಲಿ || 3 ||

ಲೋಕಸಂಗ್ರಹದಿ ಬೆಳೆದು | ಅನುಭವದ |
ಪಾಕದಿಂ ಜಗವ ತಿಳಿದು ||
ಆಕೆವಾಳತ್ವದಿಂದೆ | ಆಳ್ವ ಮನ |
ವೈ ಕಳುಹು ಸುಖಿದಿ ತಂದೆ || 4 || 29 ||

**ಕಂದ ಪದ್ಯ**
ಜಗದನುಭವಮಂ ಪಡೆಯಲ್ |
ಬಗೆದಾ ಕುಮಾರನ ಹರಸಿ ಬೀಳ್ಕೊಡಲರಸಂ ||
ಮಿಗೆ ದಿವ್ಯಾಶ್ವವನೇರುತ |
ವಿಗಡಂ ಬಗೆ ಬಗೆಯ ಸೊಬಗನೀಕ್ಷಿಸುತೈದಂ || 1 || 30 ||

**ಭೈರವಿ - ಝಂಪೆ**
ದೇಶ ದೇಶಂಗಳ ನಿವಾಸಿಗಳ ಪರಿಪರಿಯ |
ವೇಷಭಾಷೆಗಳ ಸಂಸ್ಕೃತಿಯ ||
ಕ್ಲೇಶವಿರಹಿತ ಪುಣ್ಯಕ್ಷೇತ್ರ ಋಷ್ಯಾಶ್ರಮಗ |
ಳೈಸಿರಿಯ ಕಾಣುತೈತಂದ || 1 ||
ಸುತ್ತಿದನು ಬಹುದೇಶ ಪತ್ತನವ ಜನಪದವ |
ಮತ್ತೆ ಗಿರಿಕಾಂತಾರಗಳನು ||
ಪೃಥ್ವೀಶನಣುಗ ಹಿಮಗಿರಿಯೊತ್ತಿನೊಳಗಿಳಾ |
ವರ್ತಧಾರಿಣಿಗೆ ನಡೆತಂದ || 2 || 32 ||

**ಸಾಂಗತ್ಯ - ರೂಪಕ**
ಏನಿದಚ್ಚರಿ ಪುಣ್ಯಕ್ಷೇತ್ರದಂತಿದೆ ಗಿರಿ |
ಸಾನುವೊಳ್ಮೆರೆಯುವಾರವೆಯು ||
ಮಾನವರಹಿತಮಿಂತಾರು ನಿರ್ಮಿಸಿದರು |
ಮಾನಸಸರಸಿಯೊತ್ತಿನಲಿ || 1 ||
ಆರೆರವರು ನೀರನಾರು ಕೊಯ್ವರು ಹೂವಿ |
ನ್ಯಾರ ಪೋಷಣೆಯೊಳೀ ವನವು ||
ಓರಣಗೊಂಡಿದೆ ನಿರ್ಜನಮಾಗಿಹ |
ಕಾರಣವರಿಯಬೇಕೆನುತ || 2 || 34 ||

**ಕೇದಾರಗೌಳ - ಅಷ್ಟ**
ಪರಿಶೋಭಿಸುವ ವನ ಪರಿಕಿಸಬಯಸಿ ಭೂ |
ವರಸುತನೊಳಪೊಗುತ ||
ಪರಿಸರವಿಭವ ವಿಭ್ರಮೆಗೊಳಿಸಲು ತನ್ನ |
ಪರಿ ಬದಲಾಗುತಿರೆ || 1 ||
ಅಮಮ ಏನಚ್ಚರಿ ಭ್ರಮೆಯೊ ಸತ್ಯವೊ ದೇಹ |
ಕ್ರಮತಪ್ಪಿ ಬದಲುತಿದೆ ||
ಸುಮಕೋಮಲವಿದೇನು ವಜ್ರಕಠಿನಕಾಯ |
ರಮಣೀಯ ರೂಪಾಂತಿದೆ || 2 ||
ಅಂಗಾಂಗ ಬದಲಾಗಿ ಗಂಡುತನವು ಪೋಗಿ |
ಹೆಂಗೂಸಾಗಿಹೆನೆ ನಾನು ||
ಸಂಗಡಿದ್ದಶ್ವವು ಹೆಂಗುದುರೆಯು ಚಿತ್ರ |
ದಂಗವೇನರಿಯೆನಯ್ಯೊ || 3 || 37 ||

**ಭಾಮಿನಿ**
ನಿಂದ ನೆಲದೀ ಗುಣವು ತನ್ನನು |
ಬಂಧಿಸಿರಬೇಕೆನುತ ನೃಪಸುತ |
ಬಂದನಲ್ಲಿಂ ಪೊರಗೆ ಮೊದಲಂತಹೆನು ತಾನೆಂದು ||
ನೊಂದ ಬದಲಾವಣೆಯ ಕಾಣದೆ |
ತಂದೆಗೆಂತಿದ ಪೇಳ್ವೆನಕಟಾ |
ನಂದನನೆ ಬೇಕೆಂದು ಪಡೆದಿಹ ತನಯ ತಾನಹೆನು || 1 || 38 ||

**ನೀಲಾಂಬರಿ - ರೂಪಕ**
ಹೆಣ್ಣಾಗುದಿಸಿದೆ ಗುರುಹರಿ | ಯನ್ನೊಲಿಸುತ ಪುರುಷತ್ವವ |
ಪುಣ್ಯದೊಳಿತ್ತಡೆ ಜನಕನು | ಧನ್ಯತೆ ಪಡೆದನಲಾ ||
ಇನ್ನೆಂತಾಂ ಮುಖದೋರಲಿ | ಎನ್ನಯ್ಯಗೆ ದೊರೆತಾ ಹಿರಿ |
ಮನ್ನಣೆ ಮಣ್ಣಾಯ್ತೆನ್ನಿಂ | ದುನ್ನತಿಯಳಿದುದಲಾ || 1 ||

ಪಟ್ಟದ ಮಣೆಯನ್ನಿತ್ತಡೆ | ಬಿಟ್ಟೈತಂದೆನಯೋಧ್ಯೆಗೆ |
ಕೆಟ್ಟುಡಿಯನ್ನಿಡೆ ನೀಡೆನು | ಸೃಷ್ಟೀಶಗೆ ನೋವಾ ||
ಇಟ್ಟುಕೊಳುತ ಪೂರ್ವದಿ ತನ | ಗಿಟ್ಟಿಳೆಯೆಂಬಾ ನಾಮವ |
ದಟ್ಟಡವಿಯೊಳ್ ವಾಸಿಪ ಮನ | ವಿಟ್ಟುರೆ ಚಿಂತಿಸಲು || 2 || 40 ||

**ಭಾಮಿನಿ**
ಮೃದುಲಭಾವವು ಮನದಿ ಮೊಳೆಯಲು |
ಹೃದಯದಲಿ ಹುದುಗಿತ್ತು ಪೌರುಷ |
ಸುದತಿ ವನಸೌಂದರ್ಯ ಸೊಬಗಿಂಗೊಡ್ಡಿದಳು ತನುವ ||
ಮದನಸುಖದಂಗವಣೆ ಮಾನಸ |
ಕುದಯವಾಗಲು ಮುದದೊಳಾಡುತ |
ಮಧುರಗಾನದಿ ಸುಮವನರಸುತ ವಿಹರಿಸುತ್ತಿರಲು || 1 || 41 ||

**ಶಂಕರಾಭರಣ - ತ್ರಿವುಡೆ**
ಸೌಮ್ಯ ಸುಂದರ ಚಂದ್ರನಂದನ |
ರಮ್ಯಗಿರಿವನದೇಶ ವಿಹರಿಸಿ |
ಚಿಮ್ಮಿ ಕಾಂತಿಯ ಚೆಲುವ ಬಂದನು |
ಹೆಮ್ಮೆಯಿಂದಲಿ ಹಿಮಗಿರಿ || ಸಾನುಗಿಳಿದು || 1 || 42 ||

**ಭೈರವಿ - ತ್ರಿವುಡೆ**
ಜಗದೊಡೆಯನೋಲಗವಿದೆಂಬೋಲ್ | ನಗಸಮೂಹವು ನೆರೆದಿವೆ ||
ಮೃಗ, ಮಯೂರಿಗಳರರೆ ನಾಟ್ಯದಿ | ಬಗೆಯ ಬೆರಗಿಂ ಸೆಳೆದಿವೆ ||
ಸೊಗಸಿನಿಂ ಧುಮ್ಮಿಕ್ಕಿ ನಿರ್ಝರಿ | ಣಿಗಳು ಸುತ್ತುತಲಿಳಿದಿವೆ ||
ಖಗವಿಹಾರದಿ ಗಗನಲೋಕವು | ಸೊಗದ ಸಗ್ಗವ ಮೊಗೆದು ತೋರಿವೆ || 1 ||
ಮದನನೆತ್ತಿದ ಹೆದೆಯ ಹೂವೆನೆ | ಮೃದು ಮದಾಲಸಯಾನೆಯು ||
ವಿಧಿಯ ಚಳಕದ ಚಿತ್ರಸುಂದರಿ | ಸುದತಿಯೋ ವನದೇವಿಯೋ |
ಚದುರೆ ಚಂಚಲಗೊಳಿಸುವೀಕೆಯು | ಮದನದೇವನ ಸಾಣೆಯೋ ||
ಮಧು ಮಧುರೆ ಸುಶ್ರಾವ್ಯಗಾನೆಯ | ಬುಧನು ಬೆರಗಾಗುತ್ತ ನುಡಿಸಿದ || 2 || 44 ||

**ಸಾರಂಗ - ಅಷ್ಟ - ತ್ರಿವುಡೆ - ಆದಿ**
ಬೆಡಗಿನೊಡತಿ ನೀನ್ಯಾರೆ | ಮೋಹಾಕಾರೆ |
ಉಡುಕಾಂತಿ ಮಿಡಿವ ಮೋರೆ || ಮನೋಹಾರೆ |
ಅಡಿಯಿಂ ಮುಡಿಗು ಶೃಂಗಾರೆ || ಬೆಡಗಿ ||
ಮುಡಿಗಿಡಲು ಹೂಕೊಯ್ವ ಸ್ಪರ್ಶವ |
ಪಡೆದ ಗಿಡವೇ ಧನ್ಯವಾಯಿತು |
ಪಡೆದ ಮಾತಾಪಿತರ ಭಾಗ್ಯವು |
ದೃಢತರವು ಪೇಳಾರು ಸುಂದರಿ || ಬೆಡಗಿ || 1 || 45 ||

**ಜಂಜೂಟಿ - ಅಷ್ಟ**
ಬೆರಗಿನಿಂ ನೋಡಿದಳವನ | ಇಳೆ |
ಮಿರುಗುವಪ್ರತಿಮ ಸುಂದರನ ||
ಕರಮುಗಿದಳು ತೇಜೋವರನಾರೆಂದರಿಯೆನು ||
ಅರಸುಗುವರಿಯು ವನದ ಸೊಬಗ |
ನ್ನರಿತು ಸಂತಸವಾಂತು ವಿಹರಿಪೆ || 1 || 46 ||

**ಸುರುಟಿ - ಏಕ**
ವಿಧುನಂದನ ಬುಧನು | ಸುರಜನ |
ಪದದಿಂದಿಳಿದವನು ||
ಪದುಮಾಂಬಕಿ ಪೆಸರೇನೇಕಾಂಗಿಯು |
ಹದನೇನರುಹಾವೆಡೆಯಿಂ ಬಂದಿಹೆ || 1 ||
ಇಳೆಯೆಂಬಳು ನಾನು | ಕೇಳದಿ |
ರುಳಿದಿಹ ವಿವರವನು ||
ಇಳೆಗಿಳಿದಿಹ ದೇವನೆ ವಂದಿಪೆ ಧ |
ನ್ಯಳು ನಾ ತವ ದರ್ಶನದಿಂ ಬರುವೆನು || 2 || 48 ||

**ಶಂಕರಾಭರಣ - ರೂಪಕ**
ಕನ್ನೆ ರನ್ನೆ ಸೋತೆ ನಾನು | ನಿನ್ನ ರೂಪಕೆ | ಮೋ |
ಹನ್ನೆ ಬಾಡಿ ಪೋದೆ ಪಗೋ | ಲನ್ನ ತಾಪಕೆ ||
ಚೆನ್ನೆ ವರಿಸಿ ಸುಖಿಸೆ ನೀ ಬಾ | ರೆನ್ನ ಸ್ವರ್ಗಕೆ | ನಾ |
ಧನ್ಯನಹೆನು ಸುಂದರಾಂಗಿ ಪುಣ್ಯಮಿಲನಕೆ || ಕನ್ನೆ ರನ್ನೆ || 1 ||
ದೇವಪುರುಷ ನಿನ್ನ ವರಿಪ | ಭಾವ ಸತ್ಯವ | ಈ |
ಭೂವಲಯದ ತರುಣಿಯರಿಯೆ | ನಾವ ಸಾಮ್ಯವ ||
ದೇವಲೋಕಕೈದಲಾರೆನೈ ವಿಧೂದ್ಭವ | ಹೇ |
ಪಾವನಾಂಗ ಪೇಳು ನಿನ್ನ | ಸೇವಿಪಂದವ || ದೇವಪುರುಷ || 2 || 50 ||

**ಯಮನ್‌ಕಲ್ಯಾಣಿ - ಅಷ್ಟ**
ಚದುರೆ ಮೆಚ್ಚಿದೆ ನಿನ್ನ ನುಡಿಗಾಗಿ | ಸುಖ |
ಸದನವಾಗಲಿ ಭುವಿ ದಿವವಾಗಿ ||
ಮದನಾಂಗಿ ಗಾಂಧರ್ವವಿಧಿಯಿಂದ | ನಾವು |
ಮದುವೆಯಾಗುವ ಬಾರೆ ನಲವಿಂದ || ಚದುರೆ || 1 || 51 ||

**ಭಾಮಿನಿ**
ಎರಗಿದಬಲೆಯನೆತ್ತಿ ಸೋಮನ |
ತರಳ ಸ್ವೀಕರಿಸಿದನು ವಿಧಿಯಿಂ |
ವಿರಚಿಸುತ ಮಣಿಖಚಿತಸೌಧವ ವನದ ಮಧ್ಯದಲಿ ||
ಪರಿಪರಿಯ ಸೊಗ ಮೊಗೆದು ಸವಿಯುತ |
ಗಿರಿವನಾಂತರದೊಳಗೆ ವಿಹರಿಸಿ |
ತೆರಳಿತರಿಯರು ಕಾಲ ವರುಷವು ಕ್ಷಣದ ಗಣನೆಯಲಿ || 1 || 52 ||

**ಕಾಪಿ - ಅಷ್ಟ**
ಸೊಗದ ಸಾರದ ಸಗ್ಗವರಳಿ | ಪುಟ್ಟೆ |
ಜಗವ ರಂಜಿಪ ಬಾಲ ಮುಳುಗಿ ತೋಷದಲಿ ||
ಮಗಗೆ ಪುರೂರವನೆಂದು | ನಾಮ |
ವಿಗಡಗಿಟ್ಟರು ಮತ್ತೆ ಪೇಳ್ವಳಿನೊಂದು || 1 || 53 ||

**ಸೌರಾಷ್ಟ್ರ - ಅಷ್ಟ**
ಇಂದುದೇವನ ಪೌತ್ರ ಕಂದ ಪುರೂರವ | ನಾಥ ಕೇಳು || ಸೂರ್ಯ |
ನಂದನ ಮನುವಿಗೆ ಮೊಮ್ಮನೆಮ್ಮಯ ಪುತ್ರ | ನಾಥಕೇಳು || 1 ||
ಮನುವೈವಸ್ವತನಿಗೆ ತನಯನಾಗಿರೆ ನಾನು | ಬಂದೆನಿಲ್ಲಿ || ಮತ್ತೆ |
ವನವಿಹಾರದಿ ಗಂಡು ಹೆಣ್ಣಾದೆ ಚೋದ್ಯಕೆ || ನಿಂದೆನಿಲ್ಲಿ|| 2 ||
ಅರಿಯೆ ವಿಚಿತ್ರವ ನಿನ್ನರೂಪಕೆ ಸೋತೆ | ನಾರಿಯಾಗಿ || ಒಳ |
ಗಿರುವ ರಹಸ್ಯವ ಪೇಳದೆ ತೊಳಲಿದೆ | ದಾರಿಗಾಗಿ || 3 || 56 ||

**ಸೌರಾಷ್ಟ್ರ - ತ್ರಿವುಡೆ**
ಮಿತ್ರೆ ಕೇಳು ವಿಚಿತ್ರ ನಿನ್ನ ಚ |
ರಿತ್ರೆ ಮತ್ತಾನೇನಗೈಯಲಿ |
ಪುತ್ರನಪ್ಪನು ಧರಣಿಗೇಕ | ಚ್ಛತ್ರಪತಿಯು || 1 ||
ಗುರುವಸಿಷ್ಠರ ಕಂಡು ಸತ್ಯವ |
ನರಿತು ನಡೆಯುವ ಮನವು ಮನ್ಮನ |
ದರೆಯ ಬರುವೆಯ ತರಳಸಹಿತಲಿ | ತೆರಳೆಯುಚಿತ || 2 ||
ನಿನ್ನ ಮನ ಪುರುಷತ್ವಕೆಳಸಿರ |
ಲಿನ್ನು ಸಾಂಗತ್ಯಕ್ಕೆ ಸಹಜವೆ |
ಮಾನ್ಯನೌ ಶಶಿವಂಶವಾಹಿನಿ | ಗೆನ್ನ ತರಳ || 3 ||
ದೃಢದೊಳೀತನ ಬೆಳೆಸು ನೀನೆಂ |
ದುಡುಪಸುತ ತೆರಳಲ್ಕೆ ದಿವ್ಯಕೆ |
ಮಡದಿ ಬಂದಳು ಕೊಡನಕುವರನ | ಬಿಡದಿಯೆಡೆಗೆ || 4 || 60 ||

**ಭಾಮಿನಿ**
ಸುತಸಹಿತಲೆರಗಿರುವ ಸುದತಿಯ |
ವ್ರತಿಪ ಹರಸಲು ಶೋಕವಿಹ್ವಲೆ |
ಪತಿತನಾದೆನು ಗುರುವೆ ನಾ ಸುದ್ಯುಮ್ನ ತವಶಿಷ್ಯ ||
ಸತಿಯ ರೂಪಾಂತೆನು ವನಾಂತದಿ |
ಪಿತನ ಕಾಣಲ್ಕಂಜಿರಲ್ಕುಡು |
ಪತಿಯ ತನಯನ ವರಿಸಿ ಪಡೆದೆನು ಸುತ ಪುರೂರವನ || 1 || 61 ||

**ನವರೋಜು - ಏಕ**
ಚಿಂತಿಸಬೇಡೈ ಕುವರ | ನಾ |
ಕಂತು ವಿರೋಧಿಯೊಳ್ವರವ ||
ಎಂತು ಘಟಿಸಿತೆಂ | ಬಂತರವರಿಯುತ |
ಮುಂತಿದಕುತ್ತರ | ವಂ ತಿಳಿಯುವೆ ನಾ || 1 ||
ಹರನೇ ಶಂಕರ ಶಿವನೆ | ಶುಭ |
ಕರನೇ ಗೌರೀವರನೆ ||
ತರಳನು ಹೆಣ್ಣಾ | ಗಿರುವುದ ನೀ ಪರಿ |
ಹರಿಸುತಲೀತನ | ಪೊರೆ ವಿಭು ಶಂಭುವೆ || 2 || 63 ||

**ಶಂಕರಾಭರಣ - ರೂಪಕ**
ಹರನು ಬಂದನೊಲಿದು ಮುನಿಯ |
ಕರೆಗೆ ನಮಿಸಲೆತ್ತಿ ಕೇಳ್ದ |
ಪರಮಜ್ಞಾನಿ ನಿನ್ನ ಸಿದ್ಧಿಗರಿಯದಾವುದು ||
ಪರಮಜ್ಞಾನಿ ನಿನ್ನ ಸಿದ್ಧಿಗರಿಯದಂಥ ಕಾರ್ಯವೇನೆಂ |
ದೊರೆಯಬೇಹುದೆಂದ ಗೌರೀ | ವರನು ಕರುಣದಿ || 1 ||
ಮನುಕುಮಾರನೀತ ಸುದ್ಯು |
ಮ್ನನು ವನಾಂತದೊಳಗೆ ಹೆಣ್ಣಾ |
ದನುವನರಿಯದಾದೆ ಚಿತ್ರ ಮನುಮಥಾರಿಯೆ ||
ಮನುಮಥಾರಿ ಕರುಣೆದೋರಿ |
ತನಯನನ್ನು ರಕ್ಷಿಸೆಂದು |
ಮುನಿಪ ವಿನಯದಿಂದಲೆರಗೆ | ತ್ರಿಣಯ ಪೇಳ್ದನು || 2 || 65 ||

**ಸೌರಾಷ್ಟ್ರ - ತ್ರಿವುಡೆ**
ಎನ್ನ ಶಾಪವು ಪುರುಷ ಪೊಕ್ಕರೆ |
ಹೆಣ್ಣು ತಾನಾಗುವನಿಳಾವೃತ |
ವೆನ್ನುವೀ ವನದೊಳಗೆ ಪೋಗುತ | ಮುನ್ನವೀತ || 1 ||
ಮುಂದೆ ಕ್ರಮದಲಿ ಗಂಡು ಹೆಣ್ಣಾ |
ಗೊಂದು ತಿಂಗಳೊಳಿರುವ ಬದಲುತ |
ಲೆಂದು ಹರಸಲು ಪುರುಷತನ ಮನು | ಕಂದ ಧರಿಸೆ || 2 || 67 ||

**ಸುರುಟಿ - ಏಕ**
ಹರನೈದಲು ಹರಸಿ | ಭೂಪನ |
ತರಳ ಮುನಿಗೆ ನಮಿಸಿ ||
ಪರಿಯಚ್ಚರಿ ಹರನೊರೆದಿಹ ಮಾತಿದು |
ಅರುಹಲು ಬೇಕೀ ಕಥನವನೆಂದನು || 1 || 68 ||

**ಯರಕಲ ಕಾಂಬೋಧಿ - ಅಷ್ಟ**
ಆಲಿಸೈ ಭೂಪಾಲ ಸುತ ಶಶಿ | ಮೌಳಿಯೊಂದಿವಸ || ಬೆಟ್ಟದ |
ಬಾಲೆ ಸಹಿತಿಳಿದೈದಿ ಕಂಡನಿಳಾವೃತದ ಸೊಗಸ || ಗೌರೀ |
ಲೋಲ ಲೀಲಾಮನನು ವಿಹರಿಸಿ ತುಂಬುತಿರೆ ಹರುಷ || ಮುನಿಗಳ |
ಜಾಲ ಪೊಂದುತ ಶೂಲಿಯನು ಕಾಂಬುತ್ಸವದ ಮನಸ || ಮಾನಸ |
ದಾ ಲಲಿತವನಕೈದಿ ಬರೆ ಪಟವರ್ಜಿತರ ಸರಸ || ಭಂಗಕೆ |
ಲೋಲನಯನನು ಕೋಪಿಸಲು ತ | ಮ್ಮಾಲಯಕೆ ಪಿಂತಿರುಗೆ ಶಪಿಸಿದ |
ಮೇಲೆ ಬಹ ಗಂಡಾವನಾದರು | ಕಾಲಿರಿಸೆ ಪೆಣ್ಣಾಗಲೆನ್ನುತ || ಆಲಿಸೈ || 1 ||

**ಮಧ್ಯಮಾವತಿ - ಆದಿ**
ಅನುಭವಕೆರವಾದ ಮುನಿ ಪೇಳ್ದ ಕಥೆಯ |
ಜನಪನಂದನ ಕೇಳ್ದು ತಾಳ್ದು ತಾ ವ್ಯಥೆಯ ||
ಮಣಿದು ಪರಕೆಗೊಂಡು ತನಯನ ಕೂಡಿ |
ಜನಪದದೆಡೆಗಾಗಿ ಬಂದ ಸುಪ್ರೌಢಿ || 1 ||
ವಂದಿಸಿ ನಿಂದಿರೆ ಸುತನು ಬಾಲಕನು |
ಸಂದೇಹಮನನಾಗಿ ಕೇಳ್ದ ಭೂವರನು ||
ಕಂದನಾರೀತ ವಸುಂಧರೆ ತಿರುಗಿ |
ಬಂದೆಯ ಕುವರ ನೀನೆನೆ ಪೇಳ್ದ ಮರುಗಿ || 2 || 71 ||

**ಭಾಮಿನಿ**
ಪುತ್ರನೀತನೆನುತ್ತ ತನ್ನಯ |
ಚಿತ್ರತರಮಾಗಿರುವ ಕಥನವ |
ಬಿತ್ತರಿಸೆ ಬೆರಗಾಗಿ ಚಿಂತಿಸಿದನು ಮಹೀಪಾಲ ||
ಪೌತ್ರನನು ಮುದ್ದಿಸುತಲೀತನು |
ಮಿತ್ರಸಂತತಿಗರುಹನೇನು ಕ |
ಳತ್ರವರ್ಜಿತ ಸುತನೆನುತ ಯೋಚಿಸಿದನವನೀಶ || 1 || 72 ||

**ಮೋಹನ - ಅಷ್ಟ**
ತಿಂಗಳೊಂದಕೆ ಹೆಣ್ಣಾಗಿ | ವೃದ್ಧಿಕ್ಷಯ |
ವಂಗೊಳ್ವ ಸ್ಥಿತಿಗೆ ಪೋಗಿ ||
ತಂಗದಿರನ ಕುಲ | ಸಂಗಮಿಸಿಹುದು ರಾ |
ಜ್ಯಾಂಗಾಧಿಕಾರವು | ಹಿಂಗಿತು ನಿನಗೀಗ || 1 ||
ಕಟ್ಟು ಪಟ್ಟಣವೊಂದನು | ಕುಮಾರನು |
ಪಟ್ಟಕೆ ಬರಲು ನೀನು ||
ಬಿಟ್ಟಧಿಕಾರವ | ನಿಟ್ಟು ಮನವ ಸರ್ವ |
ಶ್ರೇಷ್ಠನೊಳುನ್ನತಿಗೇರಿ ಕೀರ್ತಿತನಾಗು || 2 || 74 ||

**ಕಾಂಬೋಧಿ - ಝಂಪೆ**
ತಂದೆಯಪ್ಪಣೆಯಂತೆ ಕಟ್ಟಿದ ಪ್ರತಿಷ್ಠಾನ |
ವೆಂದೆಂಬ ಪುರವ ಸುದ್ಯುಮ್ನ ಸೊಗಸಿನಲಿ ||
ಕಂದರವು ಕೋಟೆಕೊತ್ತಲಗಳಿಂದಾವರಿಸಿ |
ಸುಂದರೋದ್ಯಾನ ವೀಥಿಗಳಿಂದ ಮೆರೆಯೆ || 1 ||
ಬುಧನ ಪ್ರತಿರೂಪದಿಂ ಕಂಗೊಳಿಪ ತರಳಂಗೆ |
ವಿಧ ವಿಧದ ವಿದ್ಯೆಗಳ ಕಲಿಸಿ ಗುರುಮುಖದಿ ||
ಮುದದಿಂ ಪ್ರತಿಷ್ಠಾನದೊಳು ಪ್ರತಿಷ್ಠಾಪಿಸುತ |
ವಿಧುವಂಶಬೆಳಗೆಂದು ತೆರಳ್ದ ವನವ್ರತಕೆ || 2 || 76 ||

**ಮಂಗಲ ಪದ್ಯ:**
**ಸಾಂಗತ್ಯ - ರೂಪಕ**
ಹೆಣ್ಣು ಗಂಡುಗಳೆಂಬ ಕಣ್ಣೆರಡ ಜಗಕಿತ್ತು |
ಪುಣ್ಯ ಪಾಪಗಳಾಟ ನಡೆಸಿ ||
ಶೂನ್ಯವ ಸಾವಿರಕೇರಿಸಿ ನಲಿಸುವ |
ಪುಣ್ಯ ಪುರುಷಗೆ ಮಂಗಲವು || 1 || 77 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಉಡುಪಿ ಯಕ್ಷಗಾನ ಕೇಂದ್ರ

**ಪ್ರಸಂಗ ಪ್ರತಿ ಆಧಾರ:** ಉಡುಪಿ ಯಕ್ಷಗಾನ ಕೇಂದ್ರ ಪ್ರಕಟಿತ ಯಕ್ಷಗಾನ ಪ್ರಸಂಗ ಮಾಲಿಕಾ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀನಿಧಿ ಡಿ. ಎಸ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ಬರವಣಿಗೆ:** ಶ್ರೀನಿಧಿ ಡಿ. ಎಸ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ